ಅನುಬಂಧ-1

ಮುಲ್ಕಿ ಹೋಬಳಿಯ ಸಂಕಲ ಕರಿಯ ಕುಡಿಯುವ ನೀರಿನ ಯೋಜನೆ

200 (60) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) - ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಲ್ಕಿ ಹೋಬಳಿಯ 20 ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆಯ ಸಂಕಲ ಕರಿಯ ನೀರು ಸರಬರಾಜು ಯೋಜನೆ ಕಳೆದ ಸಾಲಿನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಮಂಜೂರಾತಿಯ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ ;

ಆ) ಹಾಗಿದ್ದಲ್ಲಿ, ಚಾಲ್ತಿ ಸಾಲಿನಲ್ಲಿ ಮಂಜೂರಾತಿ ನೀಡಲು ಸರ್ಕಾರ ಯೋಚಿಸಿದೆಯೇ ;

ಇ) ಈ ಅಣೆಕಟ್ಟು ಕಾಮಗಾರಿ ಪೂರ್ಣಗೊಂಡಲ್ಲಿ, ಸುತ್ತಲಿನ ಸುಮಾರು 10 ಹಳ್ಳಿಗಳಿಗೆ ಬೇಸಾಯಕ್ಕೆ ನೀರು ಮಾತ್ರವಲ್ಲದೆ ಸುತ್ತಲೂ ಅಂತರ್ಜಲ ಮಟ್ಟ ಹೆಚ್ಚಿಸಲು ಅನುಕೂಲವಾಗುವುದಿಲ್ಲವೆ ;

ಈ) ಈ ವಿಷಯದಲ್ಲಿ ಸರ್ಕಾರಕ್ಕೆ ನೀಡಿರುವ ಮನವಿ ಯಾವ ಹಂತದಲ್ಲಿದೆ ; (ವಿವರಗಳನ್ನು ನೀಡುವುದು)?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು)

ಅ) ಮಂಗಳೂರು ಜಿಲ್ಲಾಪಂಚಾಯತ್ ಮುಲ್ಕಿ ಹೋಬಳಿಯ 20 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ರೂ. 810.00 ಲಕ್ಷದ ಸಂಕಲ ಕರಿಯ ಯೋಜನೆಯ ರೇಖಾ ಅಂದಾಜನ್ನು ಸಿದ್ದಪಡಿಸಿರುತ್ತದೆ.

ಆ) ಈ ಯೋಜನೆಯ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಾಧುತ್ವವನ್ನು ಪರಿಶೀಲಿಸಲಾಗುತ್ತಿದೆ.

ಇ) ಅನುಕೂಲವಾಗುತ್ತದೆ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಗಳೂರಿನ ಎಂ.ಆರ್.ಪಿ.ಎಲ್. ಬಳಿ ಇರುವ ಮುಲ್ಕಿಲಿಂಗಪ್ಪಯ್ಯ ಕಾಡು ಪ್ರದೇಶವನ್ನು ಕೊಳಚೆ ಪ್ರದೇಶವನ್ನಾಗಿ ಘೋಷಿಸುವ ಬಗ್ಗೆ

201 (88) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) - ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರಿನ M.R.P.L., ಬಳಿ ಇರುವ ಮುಲ್ಕಿ ಲಿಂಗಪ್ಪಯ್ಯ ಕಾಡು ಪ್ರದೇಶವನ್ನು ಸರ್ಕಾರವು ಕೊಳಚೆ ಪ್ರದೇಶ ಎಂಬುದಾಗಿ ಘೋಷಿಸಿರುವುದು ನಿಜವೇ ;

ಆ) ಮುಲ್ಕಿ ಪಟ್ಟಣದ ಜನಸಂಖ್ಯೆ 1 ಲಕ್ಷಕ್ಕಿಂತ ಕಡಿಮೆ ಇರುವುದರಿಂದ ಸದರಿ ಪ್ರದೇಶ ಎಸ್.ಯು.ಡಿ.ಪಿ. ಯೋಜನೆಯಡಿ ಬರುವುದಿಲ್ಲ ಎಂಬುದು ಸರಿಯೇ ; ಈ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಪರಿಗಣಿಸಿ ಅಲ್ಲಿನ ನಾಗರೀಕರಿಗೆ ಆರೋಗ್ಯ ಮತ್ತು ಇನ್ನಿತರೆ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;